- ಹೆಚ್ಚೆಚ್ಚನ್ನು ಸಾಧಿಸಲು, ಒತ್ತಡವನ್ನು ತರುವುದು
- ಅಪಾಯ, ಕಷ್ಟಕರ ಸನ್ನಿವೇಶಗಳಲ್ಲಿ ಮಗುವನ್ನು ಒಂಟಿಯಾಗಿ ಬಿಡುವುದು ಇತ್ಯಾದಿ

ಆದ್ದರಿಂದ ಮಗು ಆದಷ್ಟು ಸಕಾರಾತ್ಮಕ ಭಾವನೆಗಳನ್ನು ಅನುಭವಿಸಲು ಹಾಗೂ ಪ್ರಕಟಿಸಲು ಪಾಲಕರು ಅನುವು ಮಾಡಿಕೊಡಬೇಕು. ಪ್ರೀತಿ, ಆರೋಗ್ಯಕರ ಹವ್ಯಾಸಗಳು ಮತ್ತು ಆಸರೆಯಿಂದ ಮಕ್ಕಳಲ್ಲಿ ಸಕಾರಾತ್ಮಕ ಭಾವನೆಗಳು ವೃದ್ಧಿಸುತ್ತವೆ.

**ಸಾಮಾಜಿಕ ಬೆಳವಣಿಗೆ**

ಮಗು ತಂದೆತಾಯಿಗಳೊಂದಿಗೆ, ಒಡಹುಟ್ಟಿದವರೊಂದಿಗೆ, ಮನೆಯ ಇತರರೊಡನೆ (ಅಜ್ಜ, ಅಜ್ಜಿ, ಮಾವ, ಅತ್ತೆ) ಹೊಂದಿಕೊಳ್ಳಲು ಹಾಗೆಯೇ ನೆರೆಹೊರೆಯ ಅತಿಥಿಗಳು, ಸಹವಯಸ್ಕರೊಡನೆ ಸರಿಯಾಗಿ ವ್ಯವಹರಿಸಲು, ಬಾಂಧವ್ಯಗಳನ್ನು ಬೆಳೆಸಿಕೊಳ್ಳಲು, ತಂದೆತಾಯಿಗಳೇ ಮಾದರಿಯಾಗಬೇಕು. ದೊಡ್ಡವರನ್ನು ಗೌರವದಿಂದ ಕಾಣಲು, ಸಹವಯಸ್ಕರನ್ನು, ಸಣ್ಣವರನ್ನು ಪ್ರೀತಿಯಿಂದ ಕಾಣಲು ಮಕ್ಕಳಿಗೆ ಹೇಳಿಕೊಡಬೇಕು. ಆಹಾರ, ಸ್ಥಳ, ಭಾವನೆಗಳು, ಅನುಭವ, ಅನಿಸಿಕೆಗಳನ್ನು ಇತರರೊಡನೆ ಖುಷಿಯಿಂದ ಹಂಚಿಕೊಂಡು ಸಂತೋಷಪಡಲು ಹೇಳಿ ಕೊಡಬೇಕು. ತಮ್ಮ ಕ್ಷೇಮ, ತಂದೆತಾಯಂದಿರ ಕ್ಷೇಮ ಮತ್ತು ಸಕಲರ ಕ್ಷೇಮಕ್ಕೆ ಕೆಲಸ ಮಾಡಲು ಮಕ್ಕಳಿಗೆ ಪ್ರೋತ್ಸಾಹ ನೀಡಬೇಕು. ವ್ಯಕ್ತಿ ವ್ಯಕ್ತಿಯ ನಡುವಣ ಸಂಬಂಧದಲ್ಲಿ ಬಿರುಕು ಉಂಟಾದಾಗ, ಅದನ್ನು ಹೇಗೆ ಸರಿಪಡಿಸಬೇಕೆಂದು ತಿಳಿಸಬೇಕು. ಇತರರ ನೋವು ಭಾವನೆಗಳನ್ನು, ಕಷ್ಟ ಸಮಸ್ಯೆಗಳನ್ನು ಅವರ ದೃಷ್ಟಿಯಿಂದಲೇ ಅರ್ಥ ಮಾಡಿಕೊಳ್ಳುವ ಸಾಮರ್ಥ್ಯವನ್ನು ಮಕ್ಕಳಲ್ಲಿ ಮೂಡಿಸಬೇಕು.

**ನೈತಿಕ ಬೆಳವಣಿಗೆ**

ಯಾವುದು ನ್ಯಾಯ-ಧರ್ಮ-ಒಳ್ಳೆಯದು, ಅದು ಏಕೆ? ಯಾವುದು ಅಧರ್ಮ-ಅನ್ಯಾಯ-ಕೆಟ್ಟದ್ದು, ಅದು ಏಕೆ ಮತ್ತು ಹೇಗೆ? ಒಳ್ಳೆಯ ಮಾರ್ಗ-ವಿಧಾನವನ್ನೇ ನಾವು ಏಕೆ ಆಯ್ಕೆ ಮಾಡಬೇಕು? ನೀತಿ ನಿಯಮಗಳನ್ನು ಪಾಲಿಸುವ ಅಗತ್ಯ, ಅನ್ಯಾಯ-ಅಕ್ರಮಗಳು ನಡೆದಾಗ ಹೇಗೆ ಪ್ರತಿಭಟಿಸಬೇಕು? ಋಜು ಮಾರ್ಗದಲ್ಲಿ ನಡೆಯುವ ಅಗತ್ಯ – ಅನೀತಿ ಮಾರ್ಗದಿಂದ ಏಕೆ ದೂರವಿರಬೇಕು? –ಇವೆಲ್ಲವನ್ನೂ ಮಗು ಅರ್ಥ ಮಾಡಿಕೊಂಡು ಪಾಲಿಸುವ ಹಾಗೆ ಮಾಡುವ ಹೊಣೆ ತಂದೆತಾಯಿಗಳದು. ಶಿಕ್ಷೆಯ ಭಯದಿಂದ ರೀತಿನಿಯಮಗಳ ಪಾಲನೆ ಮಾಡದೇ, ಸ್ವ ಇಚ್ಛೆಯಿಂದ, ಸಂತೋಷದಿಂದ ರೀತಿನೀತಿಗಳನ್ನು ಪಾಲಿಸಲು ಮಕ್ಕಳಿಗೆ ಪಾಲಕರೇ ಮಾದರಿಯಾಗಬೇಕು. ಆಗ ಮಾತ್ರ ಮಕ್ಕಳಲ್ಲಿ ನೈತಿಕ ಬೆಳವಣಿಗೆ ಸಿದ್ಧಿಸುತ್ತದೆ.

**ಸ್ನೇಹಪ್ರಭ**

**ನಮ್ಮ ಮಾನವೀಯ ಸಂಬಂಧಗಳನ್ನು ಸ್ವಸ್ಥವಾಗಿರಿಸಿಕೊಂಡು, ಬಲಪಡಿಸುವುದು ಹೇಗೆ?**

ಒಂದು ಹೂಮಾಲೆಯನ್ನು ಕಲ್ಪಿಸಿಕೊಳ್ಳಿ. ಅದರಲ್ಲಿ ವಿವಿಧ ಬಣ್ಣದ, ವಿವಿಧ ಪರಿಮಳದ ಹೂವುಗಳಿರುತ್ತವೆ. ಈ ವೈವಿಧ್ಯಮಯ ಹೂವುಗಳನ್ನೆಲ್ಲ ಒಂದಾಗಿಸುವ ಸೂತ್ರ ಆ ಹೂವುಗಳ ಹಿಂದಿರುತ್ತದೆ. ಆ ಸೂತ್ರವೇ ಆ ಮಾಲೆಯ ಶಕ್ತಿ. ಅದು ದುರ್ಬಲವಾದರೆ ಮಾಲೆ ತುಂಡಾಗುತ್ತದೆ, ಹೂವುಗಳೆಲ್ಲ ಚೆಲ್ಲಾಪಿಲ್ಲಿಯಾಗಿ ಹರಡಿಹೋಗುತ್ತವೆ, ಹೂವುಗಳೆಲ್ಲ ಚದುರಿಹೋಗಿ, ತಮ್ಮ ಹೊಸತನವನ್ನೇ ಕಳೆದುಕೊಳ್ಳುತ್ತವೆ. ಮತ್ತೆ ಅವುಗಳನ್ನು ಸಂಗ್ರಹಿಸಿ ಇನ್ನೊಂದು ದಾರದಿಂದ ಮಾಲೆ ಮಾಡಿದರೂ ಮೊದಲಿನ ಸೌಂದರ್ಯ ಅದಕ್ಕಿರುವುದಿಲ್ಲ.

ಇದೇ ಮಾತು ಮಾನವೀಯ ಸಂಬಂಧಗಳಿಗೂ ಅನ್ವಯಿಸುತ್ತದೆ. ಮಾನವರಲ್ಲಿಯೂ ನಾವು ವೈವಿಧ್ಯತೆಯನ್ನು ಕಾಣುತ್ತೇವೆ. ಅವರಲ್ಲಿ ರೂಪವೈವಿಧ್ಯವನ್ನು, ವರ್ಣವೈವಿಧ್ಯವನ್ನು, ಸ್ವಭಾವ ವೈವಿಧ್ಯವನ್ನು ಕಾಣುತ್ತೇವೆ. ಹೀಗೆ ವಿವಿಧ ಬಗೆಯ ವೈವಿಧ್ಯಗಳಿರುವ ಮಾನವರೆಲ್ಲರನ್ನೂ ಬೆಸೆಯುವ ಒಂದೇ ಸೂತ್ರವೆಂದರೆ ಪ್ರೀತಿ. ಈ ಪ್ರೀತಿಯ ದಾರ ದುರ್ಬಲವಾಗಿದ್ದರೆ ಮಾನವೀಯ ಸಂಬಂಧಗಳೂ ದುರ್ಬಲವೂ ಅಸ್ವಸ್ಥವೂ ಆಗುತ್ತವೆ. ಒಮ್ಮೆ ಅದು ಕಡಿದುಹೋದರೆ ಮತ್ತೆ ಅದನ್ನು ಸರಿಪಡಿಸುವುದು ಕಷ್ಟ. ಬಾಹ್ಯ ಆವಶ್ಯಕತೆಗಳಿಗೆ ಅನುಗುಣವಾಗಿ ಅಲ್ಲಲ್ಲಿ ಸ್ವಲ್ಪ ತೇಪೆ ಹಾಕಿ ಸರಿಪಡಿಸಲು ಪ್ರಯತ್ನಿಸುತ್ತೇವೆ. ಆದರೆ ಅದು ಕೇವಲ ತಾತ್ಕಾಲಿಕ.

ಈ ಪ್ರೀತಿಯ ದಾರವನ್ನು ದುರ್ಬಲಗೊಳಿಸುವ ಅಥವಾ ಕತ್ತರಿಸುವ ವಿಷಯವೆಂದರೆ ನಮ್ಮಲ್ಲಿರುವ 'ಅಹಂ' ಭಾವ. 'ಅಹಂ' ಬಂಧದಿಂದ ಎಲ್ಲ ಸಂಬಂಧಗಳೂ ಕಡಿದುಹೋಗುತ್ತವೆ. ಈ ಅಹಂಭಾವದಿಂದ ಸ್ವಾರ್ಥತೆ ಉಂಟಾಗುತ್ತದೆ, ಅದರಿಂದ ರಾಗ ದ್ವೇಷಾದಿಗಳು ಉದ್ಭವಿಸುತ್ತವೆ. ಇವು ಎಲ್ಲ ಮಾನವೀಯ ಸಂಬಂಧಗಳನ್ನೂ ಕೆಡಿಸುತ್ತವೆ. ಎಲ್ಲ ವಿಷಯಗಳಲ್ಲಿಯೂ 'ನಾನು' ಮುಂದಾಗುವುದನ್ನು ಬಿಟ್ಟು 'ನೀನು' ಮುಂದು ಎಂಬ ಮನೋಭಾವವನ್ನು ಬೆಳೆಸಿಕೊಳ್ಳಬೇಕು. ಆದ್ದರಿಂದ ತ್ಯಾಗ ಮನೋಭಾವ ನಮಗೆ ಅತ್ಯಂತ ಮುಖ್ಯ. ವಿಷಯತ್ಯಾಗಕ್ಕಿಂತ, ನಮ್ಮ ಅಭಿಮಾನ ತ್ಯಾಗ, ನಮ್ಮ ಇಚ್ಛೆಯ ತ್ಯಾಗ – ಇವು ಮುಖ್ಯ. ಇತರರ ಅಭಿಪ್ರಾಯಗಳಿಗೆ ಗೌರವ ಕೊಡುವುದು, ಇತರರು ತಮ್ಮ ಭಾವನೆಗಳನ್ನು ವ್ಯಕ್ತಪಡಿಸಲು ಅವಕಾಶಕೊಡುವುದು, ಇತರರಿಂದಾಗುವ ನೋವನ್ನು ಸಹಿಸುವ ಮತ್ತು ಕ್ಷಮಿಸುವ ಮನೋಭಾವ, ತನ್ನ ತಪ್ಪನ್ನು ಒಪ್ಪಿಕೊಳ್ಳುವ ಧೈರ್ಯ, ಇತರರ ತಪ್ಪನ್ನು ಮನ್ನಿಸುವ ಔದಾರ್ಯ – ಈ ಎಲ್ಲ ಗುಣಗಳನ್ನು ನಾವು ಮೈಗೂಡಿಸಿಕೊಳ್ಳಬೇಕು. ಒಟ್ಟಿನಲ್ಲಿ ನಮ್ಮ ಅಂತರಂಗ ಸ್ವಸ್ಥವಾಗಿದ್ದರೆ, ಮಾನವೀಯ ಸಂಬಂಧಗಳೂ ಸ್ವಸ್ಥವಾಗಿರುತ್ತವೆ.

**ಬರಹ:** ಸ್ವಾಮಿ ನಿತ್ಯಸ್ಥಾನಂದ